					ಭೂಸ್ವಾಧೀನಪಡಿಸಿ ಕೊಂಡಿರುವ ಜಮೀನಿನ ಪಕ್ರಿಯೆಯನ್ನು ರದ್ದುಪಡಿಸಿರುವುದ ರಿಂದ ಪ್ರಾಧಿಕಾರವು ವಿಷಯ ಸಂಖ್ಯೆ 92/06ರಲ್ಲಿ ದಿನಾಂಕ 31–5–2006 ರ ಸಭೆಯಲ್ಲಿನ ರರಾವಿನಂತೆ ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವ ಸ್ಪೆಷಲ್ ಲೀವ್ ಪಿಟಿಷನ್ ಮೇಲಿನ ತೀರ್ಮಾನ ಕ್ಕೊಳಪಡಿಸಿ, ಸದರಿ ಸರ್ವೆ ನಂಬರುಗಳಲ್ಲಿನ 33 ಎಕರೆ 07 ಗುಂಟೆ ಜಮೀನನ್ನು ಮುಂದಿನ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ತೀರ್ಮಾನಿಸಿದೆ

500 **ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ** ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದಲ್ಲಿ ಪ್ರವಾಸೋದ್ಯಮ ಇಲಾಖೆಯ ಪ್ರವಾಸಿ ಮಂದಿರ ನಿರ್ಮಾಣಗೊಂಡರೂ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಪ್ರವಾಸಿ ಮಂದಿರವನ್ನು ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಟ್ರಸ್ಟ್‌ಗೆ ವಹಿಸಿಕೊಡುವಂತೆ ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು).

ಅ) ಹೌದು

ಆ) ಶ್ರೀ ಕ್ಷೇತ್ರ ರೇಣುಕಾ ಯಲ್ಲಮ್ಮ ದೇವಸ್ಥಾನ ಟ್ರಸ್ಟಿನಿಂದ ಸದರಿ ಯಾತ್ರಿಕಾ ಕಟ್ಟಡವನ್ನು ವಹಿಸಿಕೊಡುವಂತೆ ಪತ್ರವು ಇಲಾಖೆಗೆ ದಿನಾಂಕ 21–4–2004 ರಂದು ಬಂದಿರುತ್ತದೆ

ಇ) ಸದರಿ ಘಟಕವನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ 6–9–2003 ರಂದು ವಹಿಸಲಾಗಿತ್ತು ನಿಗಮದವರು ಸರ್ಕಾರದ ನಿಯಮಾನುಸಾರ ಖಾಸಗಿ ಯವರಿಗೆ ವಹಿಸುವ ಪ್ರಕ್ರಿಯೆ ಈ ಘಟಕವನ್ನು ಇತರೆ 17 ಸೌಲಭ್ಯಗಳೊಂದಿಗೆ ಒಟ್ಟು 18 ಸೌಲಭ್ಯಗಳನ್ನು ಭಾರತ ಸರ್ಕಾರದ ಸಂಸ್ಥೆಯಾದ MRPL (Mangalore Refineries and Petro Chemicals Limited) ಇವರಿಗೆ 50 ವರ್ಷಗಳ ದೀರ್ಘಾವಧಿ ROMT (Renovate Operate Maintain and Transfer) ಆಧಾರದ ಮೇಲೆ ಕೆ ಎಸ್ ಟಿ ಡಿ ಸಿ ಸಂಸ್ಥೆಯ ಮೂಲಕ ವಹಿಸಲಾಗಿರುತ್ತದೆ ಆದರೆ ಸದರಿ ಸಂಸ್ಥೆಯವರು ಈ ಘಟಕವನ್ನು ಪ್ರಾರಂಭಿಸಲು ಕಾಲಾವಕಾಶ ಕೋರಿರುವುದರಿಂದ ಕಾರಣ ಕೇಳಿ ಸದರಿಯವರಿಗೆ ನೋಟೀಸನ್ನು ನೀಡಲಾಗಿದೆ ಒಂದು ವೇಳೆ ಘಟಕವನ್ನು ಹಿಂದೆ ಪಡೆದಲ್ಲಿ ಶ್ರೀ ಕ್ಷೇತ್ರ ರೇಣುಕಾ ಯಲ್ಲಮ್ಮ ದೇವಸ್ಥಾನ ಟ್ರಸ್ಟಿಗೆ ಸದರಿ ಘಟಕವನ್ನು ವಹಿಸಲು ಪರಿಶೀಲಿಸಲಾಗುವುದು

946 ಶ್ರೀ ಪಾಟೀಲ್ ಎಂ ವೈ: ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಫಜಲ್ ಪುರ ಮತಕ್ಷೇತ್ರದಲ್ಲಿ ಬರುವ ದೇವಲ ಗಾಣಗಾಪುರ ಯಾತ್ರಾ ಸ್ಥಳದಲ್ಲಿ ಬುದ್ಧಿಮಾಂದ್ಯ ಹಾಗೂ ಅನಾಥ ಮಕ್ಕಳನ್ನು ಈ ಸ್ಥಳದಲ್ಲಿ ಬಿಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಬುದ್ಧಿಮಾಂದ್ಯ ಹಾಗೂ ಅನಾಥ ಮಕ್ಕಳು ಬೀದಿಯಲ್ಲಿ ಭೀಕ್ಷೆ ಬೇಡುತ್ತಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬುದ್ಧಿಮಾಂದ್ಯ ಮತ್ತು ಅನಾಥ ವಯಸ್ಕ ಹೆಣ್ಣುಮಕ್ಕಳು ಅತ್ಯಾಚಾರಕ್ಕೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಇಂತಹವರನ್ನು ಸಂರಕ್ಷಣೆ ಮಾಡುವ ಸಲುವಾಗಿ ಈ ಯಾತ್ರಾಸ್ಥಳದಲ್ಲಿ ಶಾಶ್ವತವಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸರ್ಕಾರ